ನಂ.ನಸತು:ದಾಸ್ತಾನು:9/2007–08

ನಗರಸಭಾ ಕಾರ್ಯಾಲಯ
ತುಮಕೂರು
ದಿನಾಂಕ 24–05–2007

# ಅಲ್ಪಾವಧಿ ಟೆಂಡರ್ ಪ್ರಕಟಣೆ

ತುಮಕೂರು ನಗರಸಭೆ ವ್ಯಾಪ್ತಿಯಲ್ಲಿ ಕೊಳವೆ ಬಾವಿಗಳಿಗೆ ಸಬ್‌ಮರ್ಷಿಬಲ್ ಪಂಪ್‌ಸೆಟ್‌ಗಳನ್ನು ಅಳವಡಿಸಬೇಕಾಗಿದ್ದು ಸಂಬಂಧಪಟ್ಟ ಅಧಿಕೃತ ಮಾರಾಟಗಾರರಿಂದ ಕಡಿಮೆ ದರದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

1. ಟೆಂಡರ್ ಫಾರಂ ಬೆಲೆಯೊಂದಿಗೆ ಅರ್ಜಿ ಸಲ್ಲಿಸಬೇಕಾದ ಕೊನೆಯ ದಿನಾಂಕ 28–05–2007 ರಿಂದ 14–6–2007ರವರೆಗೆ ಕಛೇರಿ ವೇಳೆಯಲ್ಲಿ ಅರ್ಜಿ ಶುಲ್ಕವನ್ನು ಪಾವತಿ ಮಾಡಿ ಅರ್ಜಿಯೊಂದಿಗೆ ಲಗತ್ತಿಸಿ ಪೌರಾಯುಕ್ತರು, ನಗರಸಭೆ, ತುಮಕೂರು ರವರಿಗೆ ಸಲ್ಲಿಸಬಹುದಾಗಿದೆ. ನಂತರ ಬಂದ ಅರ್ಜಿಗಳನ್ನು ಸ್ವೀಕರಿಸುವುದಿಲ್ಲ.
2. ಖಾಲಿ ಟೆಂಡರ್ ಫಾರಂಗಳನ್ನು ನೀಡುವ ದಿನಾಂಕ 28–05–2007 ರಿಂದ 14–6–2007ರವರೆಗೆ ಕಛೇರಿಯ ವೇಳೆಯಲ್ಲಿ ಅರ್ಹ ಟೆಂಡರ್‌ದಾರರಿಗೆ ಟೆಂಡರ್ ಫಾರಂ ನೀಡಲಾಗುವುದು.
3. ಭರ್ತಿ ಮಾಡಿದ ಫಾರಂಗಳನ್ನು ದಿನಾಂಕ 16–06–2007 ರಂದು 4.30 ಗಂಟೆಯೊಳಗಾಗಿ ಪೌರಾಯುಕ್ತರು, ನಗರಸಭೆ, ತುಮಕೂರು ರವರ ಕೊಠಡಿಯಲ್ಲಿ ಇಟ್ಟಿರುವ ಟೆಂಡರ್ ಬಾಕ್ಸ್‌ನಲ್ಲಿ ಸಲ್ಲಿಸಬಹುದಾಗಿದೆ.
4. ಟೆಂಡರ್ ಫಾರಂಗಳನ್ನು ಸಾಧ್ಯವಾದರೆ ಅದೇ ದಿನಾಂಕ 16–06–2007 ರಂದು ಸಂಜೆ 4.00 ಗಂಟೆಯೊಳಗಾಗಿ ಅಥವಾ ಮುಂದಿನ ಕಛೇರಿ ವೇಳೆಯಲ್ಲಿ ಹಾಜರಿರುವ ಟೆಂಡರ್‌ದಾರರ ಸಮ್ಮುಖದಲ್ಲಿ ತೆರೆಯಲಾಗುವುದು.

| ಕ್ರ.ಸಂ. | ಸಾಮಗ್ರಿಗಳ ವಿವರ | ಅಂದಾಜು ಮೊತ್ತ (ಲಕ್ಷಗಳಲ್ಲಿ) | ಇಎಂಡಿ ಮೊತ್ತ | ಟೆಂಡರ್ ಫಾರಂ ಬೆಲೆ ಹಿಂದಿರುಗಿಸಲಾಗುವುದಿಲ್ಲ | ಟೆಂಡರ್ ಫಾರಂಗಾಗಿ ಅರ್ಜಿ ಸಲ್ಲಿಸುವ ದಿನಾಂಕ | ಟೆಂಡರ್ ಫಾರಂಗಳನ್ನು ವಿತರಿಸುವ ದಿನಾಂಕ | ಭರ್ತಿ ಮಾಡಿದ ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆ ದಿನಾಂಕ | ಟೆಂಡರ್ ಕಾಲಾವಧಿ |
|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 |
| 1 | 1) 2 ಹೆಚ್.ಪಿ. 40 ಸ್ಟೇಜ್, ಸಿಂಗಲ್ ಪೇಸ್ ಮೋಟಾರು 600 ಅಡಿ ಮೇಲ್ಪಟ್ಟು ನೀರು ಎತ್ತುವ ಪಂಪು ಮೋಟಾರ್ ವಿತ್ ಪ್ಯಾನಲ್ ಬೋರ್ಡ್ ಸೇರಿ 1ಕ್ಕೆ<br>2) 15 ಹೆಚ್.ಪಿ. ಓಪನ್‌ವೆಲ್ ಸಬ್ ಮರ್ಷಿಬಲ್ ಪಂಪು ಮೋಟಾರು ಸೇರಿ 1ಕ್ಕೆ | 4.00 | 8000.00 | 500+ ತೆರಿಗೆ | 28–05–2007 ರಿಂದ 14–6–2007 | 28–5–07 ರಿಂದ 14–6–07 | 16–6–2007 | 31–3–2008 |

## ಷರತ್ತುಗಳು

1. ಟೆಂಡರ್ ಫಾರಂಗಾಗಿ ಅರ್ಜಿ ಸಲ್ಲಿಸುವುದು ಮತ್ತು ಭರ್ತಿ ಮಾಡಿದ ಟೆಂಡರ್ ಫಾರಂಗಳನ್ನು ನಗರಸಭೆ ಪೌರಾಯುಕ್ತರ ಕೊಠಡಿಯಲ್ಲಿ ಇಟ್ಟಿರುವ ಟೆಂಡರ್ ಬಾಕ್ಸ್‌ನಲ್ಲಿ ಸಲ್ಲಿಸುವುದು.

2. ಸಾಮಗ್ರಿಗಳ ದರವನ್ನು ನಮೂದಿಸುವಾಗ ಎಲ್ಲಾ ತೆರಿಗೆಗಳನ್ನು ಒಳಗೊಂಡಿರತಕ್ಕದ್ದು.
3. ದರವನ್ನು ಅರ್ಜಿಯಲ್ಲಿ ನಮೂದಿಸುವಾಗ ಅಂಕಿ ಮತ್ತು ಅಕ್ಷರಗಳಲ್ಲಿರಬೇಕು ಹಾಗೂ ತಿದ್ದಿರಬಾರದು.
4. ಠೇವಣಿ ಇಲ್ಲದೆ ಟೆಂಡರನ್ನು ಗಮವಕ್ಕೆ ತೆಗೆದುಕೊಳ್ಳುವುದಿಲ್ಲ.
5. ಠೇವಣಿ ಹಣಕ್ಕೆ ಯಾವುದೇ ವಿಧವಾದ ಬಡ್ಡಿ ಪಾವತಿಸುವುದಿಲ್ಲ.
6. ಟೆಂಡರ್ ಸ್ವೀಕರಿಸುವ ಅಥವಾ ತೀರಸ್ಕರಿಸುವ ಅಧಿಕಾರವನ್ನು ನಗರಸಭೆ ಕಾಯ್ದಿರಿಸಿಕೊಂಡಿದೆ.
7. ಸರಬರಾಜು ಮಾಡುವ ಸಾಮಗ್ರಿಗಳನ್ನು ಸ್ವಂತ ಖರ್ಚಿನಿಂದ ದಾಸ್ತಾನು ಶಾಖೆಗೆ ಸರಬರಾಜು ಮಾಡತಕ್ಕದ್ದು.
8. ಟೆಂಡರ್‌ದಾರರು ಡಿಡಿ ಅಥವಾ ಕಾರ್ಯಾಲಯದಲ್ಲಿ ಹಣ ಕಟ್ಟಿದ ರಸೀದಿ ಪಡೆದು ಟೆಂಡರ್ ಫಾರಂನಲ್ಲಿ ಲಗತ್ತಿಸತಕ್ಕದ್ದು.
9. ಟೆಂಡರನ್ನು ಅದೇ ದಿನ ಅಥವಾ ಸರ್ಕಾರಿ ರಜಾದಿನ ಹೊರತುಪಡಿಸಿ ಪೌರಾಯುಕ್ತರ ಕಾರ್ಯಾಲಯದಲ್ಲಿ ತೆರೆಯಲಾಗುವುದು.
10. ಸರಬರಾಜುದಾರರ ಮಾರಾಟ ತೆರಿಗೆ ಇಲಾಖೆಯ ನೊಂದಾವಣೆದಾರರಾಗಿರಬೇಕು. ನೊಂದಾವಣೆ ಪತ್ರ ಲಗತ್ತಿಸಲಕ್ಕದ್ದು.
11. ಪಂಪ್ ಮತ್ತು ಮೋಟಾರ್ ಸಾಮಗ್ರಿಗಳು ಐ.ಎಸ್.ಓ ಗುಣಮಟ್ಟ ಹೊಂದಿರತಕ್ಕದ್ದು. ಹಾಗೂ ಐ.ಎಸ್.ಓ. ಪ್ರಮಾಣ ಪತ್ರ ಲಗತ್ತಿಸತಕ್ಕದ್ದು.
12. ಸಾಮಗ್ರಿಗಳನ್ನು ಸರಬರಾಜು ಆದೇಶ ನೀಡಿದ 15 ದಿನದೊಳಗಾಗಿ ಸರಬರಾಜು ಮಾಡತಕ್ಕದ್ದು.
13. ಸಾಮಗ್ರಿಗಳ ಗುಣಮಟ್ಟದ ಬಗ್ಗೆ ಮೂರನೇ ಪಾರ್ಟಿಯವರಿಂದ (ಎಸ್.ಜಿ.ಎಸ್. ಅಂಡ್ ಡಿ.ಜಿ.ಎಸ್.ಎನ್.ಡಿ) ರವರಿಂದ ಸರ್ಟಿಫಿಕೇಟ್ ಲಗತ್ತಿಸತಕ್ಕದ್ದು. ಇದಕ್ಕೆ ತಗಲುವ ವೆಚ್ಚವನ್ನು ಟೆಂಡರ್‌ದಾರರೇ ಭರಿಸತಕ್ಕದ್ದು.
14. ಠೇವಣಿಯನ್ನು ಸಲ್ಲಿಸದ ಹಾಗೂ ಅವಧಿಮೀರಿ ಬಂದಂತಹ ಮತ್ತು ನಿಬಂಧನೆಗಳನ್ನು ವಿಧಿಸಿ ಸಲ್ಲಿಸುವ ಟೆಂಡರ್‌ಗಳನ್ನು ಅಂಗೀಕರಿಸುವುದಿಲ್ಲ.
15. ಟೆಂಡರ್ ಫಾರಂ ದ್ವಿಪ್ರತಿಯಲ್ಲಿದ್ದು 1ನೇ ಟೆಂಡರ್ ಫಾರಂನಲ್ಲಿ ದಾಖಲಾತಿಗಳನ್ನು ಲಗತ್ತಿಸತಕ್ಕದ್ದು. ಮೊದಲು ದಾಖಲಾತಿಗಳ ಟೆಂಡರನ್ನು ತೆರೆದು ದಾಖಲಾತಿಗಳು ಸರಿಯಿದ್ದಲ್ಲಿ ಎರಡನೇ ಟೆಂಡರನ್ನು ತೆರೆಯಲಾಗುವುದು.
16. ಹೆಚ್ಚಿನ ಮಾಹಿತಿಯನ್ನು ಮತ್ತು ನಿಬಂಧನೆಗಳನ್ನು ತಾಂತ್ರಿಕ ಶಾಖೆಯಿಂದ ಪಡೆದುಕೊಳ್ಳಬಹುದು.

**(ಎಸ್.ಆರ್.ಉಮಾಶಂಕರ್ ಭಾ.ಆ.ಸೇ)**
**ಜಿಲ್ಲಾಧಿಕಾರಿಗಳು ಹಾಗೂ ಆಡಳಿತಾಧಿಕಾರಿಗಳು**
**ನಗರಸಭೆ, ತುಮಕೂರು.**

**(ಅಬ್ದುಲ್ ಖಯ್ಯೂಂ ಕೆ.ಎಂ.ಎ.ಎಸ್.)**
**ಪೌರಾಯುಕ್ತರು**
**ನಗರಸಭೆ, ತುಮಕೂರು.**